

## ಎಷ್ಟೊಂದು ಪುಸ್ತಕಗಳು!

'ನಿಮ್ಮ ಗಂಡು ಮಕ್ಕಳನ್ನು ಬೆಳೆಸುವುದು ಹೇಗೆ?' (How to raise your boys) ಎಂಬ ಬಗ್ಗೆ ವಿದೇಶಗಳಲ್ಲಿ ಬಂದಿರುವ ಪುಸ್ತಕಗಳಿಗೆ ಲೆಕ್ಕವೇ ಇಲ್ಲ. ಅವುಗಳಲ್ಲಿ ಇತ್ತೀಚಿನದ್ದು ಡಾ. ಜೇಮ್ಸ್ ಡಾಬ್‌ಸನ್ ಎಂಬಾತನ Bringing up Boys ಎಂಬ ಪುಸ್ತಕ. ಅದರ ಪ್ರಕಾರ ಏಳು ಅಂಶಗಳು ಹುಡುಗರನ್ನು ಬೆಳೆಸುವಲ್ಲಿ ಮುಖ್ಯ.

★ ಅವರ ಶಕ್ತಿಯನ್ನು ಹಿಂಸೆಯ ಬದಲು ಒಳ್ಳೆಯ ನಡವಳಿಕೆಗಳ ತಿರುಗಿಸಿ.

★ ಮಾಧ್ಯಮ ಹಿಂಸೆಯಿಂದ ದೂರವಿಡಿ, ಖಿನ್ನತೆಯ ಲಕ್ಷಣಗಳನ್ನು ಗುರುತಿಸಿ.

★ ಮುಕ್ತ ಸಂವಹನ, ಮಾರ್ಗದರ್ಶನ, ಪ್ರೀತಿ ನೀಡಿ.

★ ಅನುಸರಿಸುವ ಮಾದರಿಗಳನ್ನು (Role Models) ನೀಡಿ.

★ ಮಕ್ಕಳಿಗೆ ನಿಮ್ಮ ಸಮಯ ನೀಡಿ.

★ ಆಧ್ಯಾತ್ಮಕ್ಕೆ ಅವರನ್ನು ಪರಿಚಯಿಸಿ.

ಇವುಗಳಲ್ಲಿ ಹೆಚ್ಚಿನವು ಯಾವುದೇ ಮಕ್ಕಳನ್ನು ಬೆಳೆಸಲು ಮುಖ್ಯವಾದ ಅಂಶಗಳೇ ಎಂಬುದು ಗಮನಾರ್ಹ. ತನ್ನ ಆಧ್ಯಾತ್ಮಿಕ ನಿಲುವಿನಿಂದ ಸಾಕಷ್ಟು ಚರ್ಚೆಗೂ ಕಾರಣವಾದ ಪುಸ್ತಕ ಇದು!

ಸಾಮರ್ಥ್ಯ, ಭಾವನಾತ್ಮಕತೆ, -ಪ್ರಾಯೋಗಿಕತೆಯಿಂದ ಸಂತಸದ ಜೀವನ ನಡೆಸಲು ಸಾಧ್ಯವಿದೆ.

ಹುಡುಗರ ಟೀಶರ್ಟ್‌ಗಳು ಹೇಳುವ **Tough like Daddy** ಯಷ್ಟೇ ಮುಖ್ಯವಾದದ್ದು **Resilient like Mommy** ಎನ್ನುವುದನ್ನು ಮರೆಯದಿರಿ.

**Grass is always greener on the other side** ಎಂಬ ಗಾದೆ ಕೇಳಿದ್ದೀರಾ? ಅಂದರೆ ಇನ್ನೊಂದು ಪಕ್ಕದಲ್ಲಿರುವ ಹುಲ್ಲು ಯಾವಾಗಲೂ ಈ ಪಕ್ಕಕ್ಕಿಂತ ಹಸಿರೇ! ಅಂದರೆ ಅಪ್ಪ-, ಅಮ್ಮ ಂದಿರು, ತಮ್ಮ ಮಕ್ಕಳ ಸಮಸ್ಯೆಗಳಿಂದ ಕಂಗಾಲಾಗಿ ಬಂದಾಗ ಬಹು ಬಾರಿ ಆ ಸಮಸ್ಯೆಯನ್ನು ಆರೋಪಿಸುವುದು 'ಮಗ/ ಮಗಳು, ಆದ್ದರಿಂದಲೇ ಈ ಸಮಸ್ಯೆ' ಎಂದೇ. ಆದರೆ ವಿಶ್ಲೇಷಿಸಿದರೆ ಇಲ್ಲಿ ಲಿಂಗವಷ್ಟೇ ಅಲ್ಲ, ಬಹಳ ಅಂಶಗಳನ್ನು ಸಮಸ್ಯೆ ಅವಲಂಬಿಸಿರುತ್ತದೆ.

ಒಬ್ಬ ತಾಯಿಗೆ ತನ್ನ ಮಗಳು ತನ್ನ ಸೌಂದರ್ಯದ ಬಗೆಗೆ ಮಾಡುವ ಕಾಳಜಿಯ ಕುರಿತು ಬೇಸರ. ಅದೇ ಇನ್ನೊಂದು ಅಮ್ಮನದು ತನ್ನ ಮಗ ಸ್ವಚ್ಛ ಬಟ್ಟೆಗೆ ಬದಲು ಮಾಡುವುದಿಲ್ಲ ಎಂಬ ದೂರು.

ಒಟ್ಟಿನಲ್ಲಿ ಗಂಡೋ, ಹೆಣ್ಣೋ 'ಮಕ್ಕಳನ್ನು' ಬೆಳೆಸುವುದು ಸುಲಭದ ಕೆಲಸವಲ್ಲ! 'ಗಂಡು ಮಕ್ಕಳು ಹೀಗೆ' 'ಹೆಣ್ಣು ಮಕ್ಕಳು ಹಾಗೆ' ಎಂಬ ಆಳವಾಗಿ ಬೇರೂರಿಸಿಕೊಂಡ ನಂಬಿಕೆಗಳನ್ನು ನಾವು ಬದಿಗಿಡಬೇಕು. ಆಯಾ ಮಗುವಿನ ಸಾಮರ್ಥ್ಯ, ಅಸಮರ್ಥತೆ ಗುರುತಿಸಬೇಕು. ಕಷ್ಟದ ಈ ಬೆಳೆಸುವಿಕೆಯಲ್ಲಿಯೂ ಇರುವ ಆನಂದವನ್ನು ಕಂಡುಕೊಂಡು ಮುನ್ನಡೆಯಬೇಕು.

ವೈಜ್ಞಾನಿಕವಾದ ಮಾಹಿತಿ, -ಅಧ್ಯಯನಗಳು,- ಸಂಶೋಧನೆಗಳು ಎಷ್ಟೇ ಇರಲಿ, ಏನೇ ಹೇಳಲಿ; ಹುಡುಗ- ಹುಡುಗಿಯರನ್ನು ಬೆಳೆಸುವ ವಿಧಾನಗಳು ಬದಲಾಗುವುದು ಸುಲಭ ಎನಿಸುವುದಿಲ್ಲ. ಬದಲಾವಣೆಗಳು ನಿಧಾನವೇ ಆದರೂ, ಚಿಕ್ಕ ಚಿಕ್ಕ ವಿಷಯಗಳಿಂದಲೇ ಆರಂಭವಾದರೆ, ಅದು ತರುವ ಸುಧಾರಣೆ ಅಪಾರ. 'ಮಕ್ಕಳು ಬೆಳೆದೇ ಬೆಳೆಯುತ್ತಾರೆ, ಅದರ ಬಗೆಗೆ ನಾವು ಯೋಚಿಸುವುದೇ ವ್ಯರ್ಥ' ಎಂಬ ಅಭಿಪ್ರಾಯವೂ ಹಲವರಲ್ಲಿದೆ. ಆದರೆ ನಮ್ಮ ಮಕ್ಕಳು ಬೆಳೆಯುವ ರೀತಿ ಕೇವಲ ಅವರ ಜೀವನವನ್ನಷ್ಟೇ ಅಲ್ಲ, ಇತರರ ಜೀವನವನ್ನೂ ಒಳಗೊಳ್ಳುತ್ತದೆ ಎಂಬುದು ಗಮನಾರ್ಹ.

ಗಂಡು ಮಕ್ಕಳನ್ನು, ಹೆಣ್ಣು ಮಕ್ಕಳನ್ನು ಬೆಳೆಸುವ ಚರ್ಚೆ ಬಂದಾಗ ಮನೋವಿಜ್ಞಾನ ಮೊಟ್ಟಮೊದಲು ನಮ್ಮ ಗಮನ ಸೆಳೆಯುವುದು 'ಮಕ್ಕಳನ್ನು' ಬೆಳೆಸುವ ಬಗ್ಗೆ! ಜೈವಿಕವಾಗಿ ವ್ಯತ್ಯಾಸಗಳಿದ್ದರೂ ಮಕ್ಕಳು ಯಾರೇ ಆಗಲಿ ಪ್ರಕೃತಿ - ಮತ್ತು ವಾತಾವರಣ -ಆರೈಕೆ ಇವೆರಡರ ಪ್ರಭಾವದಿಂದ ಬೆಳೆಯುತ್ತಾರೆ. ಹಾಗಾಗಿ ವಾತಾವರಣ- ಆರೈಕೆ ಇಬ್ಬರಿಗೂ ಸಮಾನ ಅವಕಾಶಗಳನ್ನು - ಮೌಲ್ಯಗಳನ್ನು ನೀಡುವಂತಿರಬೇಕು. ಸಹಾನುಭೂತಿ, ಗೌರವ, ಆತ್ಮ ವಿಶ್ವಾಸ ಮತ್ತು ಸ್ವಾತಂತ್ರ್ಯ, ಆದರೆ ಸ್ವಚ್ಛಂದವಲ್ಲದ ಮನೋಭಾವ ಇಬ್ಬರಿಗೂ ಬೇಕು. 'ಪ್ರತಿಯೊಂದು ಮಗುವೂ ವಿಶಿಷ್ಟ' ಎಂಬುದನ್ನು ನಾವು ಬರೀ ಮಾತಿನಲ್ಲಿ ಆಡದೆ, ಪ್ರಾಯೋಗಿಕವಾಗಿ ಮಕ್ಕಳನ್ನು ಬೆಳೆಸುವುದರಲ್ಲಿ ಅನುಸರಿಸಬೇಕು. ಆಗ ಬಾಲ್ಯವನ್ನು, ತನ್ನನ್ನು ಹೇಗೆ ಬೆಳೆಸಬೇಕು ಎನ್ನುವುದಕ್ಕೆ ಮಾರ್ಗದರ್ಶನವನ್ನು ಆಯಾ ಮಗುವಿನ ಸ್ವಭಾವವೇ ನಮಗೆ ತೋರಿಸಿಕೊಡುತ್ತದೆ! ಗಂಡು ಮಗುವಾಗಲೀ, ಹೆಣ್ಣು ಮಗುವಾಗಲೀ 'ಸರಿಯಾಗಿ'ಯೇ ಬೆಳೆಯುತ್ತಾರೆ. ಅಪ್ಪ- ಅಮ್ಮನ ಪ್ರಕಾರ 'ಸರಿಯಾಗಿ' ಬೆಳೆದಿರುವ ಹಂತ ತಲುಪಿಯೂ ಸಂತೋಷವಾಗಿರುತ್ತಾರೆ!